ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

32

ಇಲಾಖೆ / ವಿಷಯ : DEPARTMENT / SUBJECT: ಗೃಹ – CD ಪ್ರಕರಣ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 16/3/21

# ಸಿಡಿಗೆ ವಾಯ್ಸ್ ಕೊಟ್ಟವ ಪತ್ತೆ?

## ವಿಚಾರಣೆಗೆ ಗೈರಾದ ಲೇಡಿ, ಮುಂದುವರಿದ ಪೊಲೀಸರ ಶೋಧ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು 16-3-21

ರಾಜ್ಯ ರಾಜಕಾರಣದಲ್ಲಿ ಕೋಲಾಹಲ ಸೃಷ್ಟಿಸಿರುವ ಅಶ್ಲೀಲ ಸಿಡಿ ಪ್ರಕರಣದ ತನಿಖೆ ಚುರುಕುಗೊಳಿಸಿರುವ ವಿಶೇಷ ತನಿಖಾ ತಂಡ (ಎಸ್ಐಟಿ) ಶಂಕಿತ ಇಬ್ಬರನ್ನು ಮತ್ತೆ ವಿಚಾರಣೆ ನಡೆಸಿ ಮಹತ್ವದ ಮಾಹಿತಿ ಕಲೆ ಹಾಕಿದೆ. ವಿಡಿಯೋಗೆ ಹಿನ್ನೆಲೆ ಧ್ವನಿ ಕೊಟ್ಟಿದ್ದಾನೆ ಎನ್ನಲಾದ ಚಿಕ್ಕಮಗಳೂರಿನ ಯುವಕನ ವಾಯ್ಸ್ ಸ್ಯಾಂಪಲ್ಸ್ ಪಡೆದು ಎಫ್ಎಸ್ಎಲ್ ಪರೀಕ್ಷೆ ಕಳುಹಿಸಲಾಗಿದೆ. ಧ್ವನಿ ಯುವಕನದ್ದೆ ಎಂದು ದೃಢಪಟ್ಟರೆ ಆತನನ್ನು ಬಂಧಿಸಲಾಗುವುದು ಎಂದು ಎಸ್ಐಟಿ ಮೂಲಗಳು ತಿಳಿಸಿವೆ. ಜತೆಗೆ ಯುವತಿಯ ಪ್ರಿಯತಮನನ್ನು ವಶಕ್ಕೆ ಪಡೆದು ಆಡುಗೋಡಿಯ ಸೈಬರ್ ಸೆಲ್ ಬಳಿ ಸೋಮವಾರ ವಿಚಾರಣೆ ನಡೆಸಲಾಗಿದೆ. ವಿಚಾರಣೆ ವೇಳೆ ಆರೋಪಿಗಳ ಹೇಳಿಕೆಗಳನ್ನು ಪ್ರತ್ಯೇಕವಾಗಿ ದಾಖಲಿಸಲಾಗಿದೆ. ಆದರೆ ಶಂಕಿತರು ಯಾವುದೇ ಸ್ಪಷ್ಟ ಹೇಳಿಕೆ ಕೊಟ್ಟಿಲ್ಲ ಎನ್ನಲಾಗಿದೆ.

» **ಚಿಕ್ಕಮಗಳೂರು ಯುವಕನ ಧ್ವನಿ ಸ್ಯಾಂಪಲ್ಸ್ ಎಫ್ಎಸ್ಎಲ್‌ಗೆ**

**ಯುವತಿ ಗೈರು:** ಸೋಮವಾರ ಬೆಳಗ್ಗೆ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಗೆ ವಿಚಾರಣೆಗೆ ಹಾಜರಾಗುವಂತೆ ಸಿಡಿಯಲ್ಲಿರುವ ಯುವತಿ ಸೇರಿ ನಾಲ್ವರಿಗೆ ನೋಟಿಸ್ ಜಾರಿ ಮಾಡಲಾಗಿತ್ತು. ಆದರೆ, ಯುವತಿ ವಿಚಾರಣೆಗೆ ಗೈರಾಗಿದ್ದಾಳೆ. ಮತ್ತೊಂದೆಡೆ ಸದಾಶಿವನಗರ ಠಾಣೆಯಲ್ಲಿ ಮಾಜಿ ಸಚಿವ ರಮೇಶ್ ಜಾರಕಿಹೊಳಿ ದಾಖಲಿಸಿರುವ ದೂರಿನ ಸಂಬಂಧ ಪ್ರಕರಣದಲ್ಲಿ ಶಾಮೀಲಾದವರನ್ನು ಸದ್ಯದಲ್ಲೇ ಬಂಧಿಸಲು ಎಸ್ಐಟಿ ಸಿದ್ಧತೆ ನಡೆಸಿದೆ.

**ನಾಪತ್ತೆಯಾದವರಿಗೆ ಶೋಧ:** ನಾಪತ್ತೆಯಾಗಿರುವ ಪ್ರಕರಣದ ಕಿಂಗ್‌ಪಿನ್ ಹಾಗೂ ಸಿಡಿ ಮೇಕಿಂಗ್ ಮಾಡಿದ ವ್ಯಕ್ತಿಗಾಗಿ ಎಸ್ಐಟಿ ಅಧಿಕಾರಿಗಳು ಶೋಧ ಕಾರ್ಯ ಮುಂದುವರಿಸಿದ್ದಾರೆ. ನಾಪತ್ತೆಯಾದವರು ತಾಂತ್ರಿಕವಾಗಿ ಪೊಲೀಸರ ಕೈಗೆ ಸಿಗದಂತೆ ಮುನ್ನೆಚ್ಚರಿಯಿಂದ ಓಡಾಡುತ್ತಿದ್ದಾರೆ. ತಮಿಳುನಾಡು, ಆಂಧ್ರಪ್ರದೇಶ ಸುತ್ತ-ಮುತ್ತ ತಿರುಗಾಡುತ್ತಿರುವುದು ಗೊತ್ತಾಗಿದೆ. ಕಿಂಗ್‌ಪಿನ್ ಎನ್ನಲಾದ ವ್ಯಕ್ತಿ ಹಾಗೂ ಆತನೊಂದಿಗಿರುವ ಸಿಡಿ ಮೇಕರ್ ಸಿಕ್ಕಿಬಿದ್ದರೆ ಸಿಡಿ ಹಿಂದಿನ ಎಲ್ಲ ರಹಸ್ಯಗಳೂ ಬಯಲಾಗಲಿವೆ. ಮತ್ತೊಂದೆಡೆ ಕಿಂಗ್‌ಪಿನ್ ಎನ್ನಲಾದ ವ್ಯಕ್ತಿಯ ಪತ್ನಿಗೆ ಮಂಗಳವಾರ ವಿಚಾರಣೆಗೆ ಹಾಜರಾಗುವಂತೆ ಎಸ್ಐಟಿ ನೋಟಿಸ್ ಜಾರಿ ಮಾಡಿದೆ.

### ಮಹಿಳಾ ಆಯೋಗ ಎಂಟ್ರಿ



ಮಹಿಳಾ ಆಯೋಗವು ಸಿಡಿ ಪ್ರಕರಣದಲ್ಲಿ ಸ್ವಯಂ ದೂರು ದಾಖಲಿಸಿಕೊಂಡಿದೆ. ಸೋಮವಾರ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಸಿಡಿಯಲ್ಲಿರುವ ಯುವತಿಗೆ ರಕ್ಷಣೆ ನೀಡುವಂತೆ ಕೇಳಿಕೊಂಡಿದ್ದೇನೆ. ಗೃಹ ಸಚಿವರು ಯುವತಿಗೆ ರಕ್ಷಣೆ ನೀಡುವುದಾಗಿ ಭರವಸೆ ನೀಡಿದ್ದಾರೆ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮೀಳಾ ನಾಯ್ಡು ವಿಜಯವಾಣಿಗೆ ತಿಳಿಸಿದ್ದಾರೆ.

### ಪೊಲೀಸರಿಗೂ ತಲೆನೋವು

ಒಂದೆಡೆ ಸರ್ಕಾರದ ಸೂಚನೆ ಪಾಲನೆ ಮಾಡಬೇಕು. ಮತ್ತೊಂದೆಡೆ ಯುವತಿ ಯಾವ ನಿರ್ಧಾರಕ್ಕೆ ಬರುತ್ತಾಳೆ ಎಂಬುದನ್ನೂ ಗಮನಿಸುವುದು ಪೊಲೀಸರಿಗೆ ತಲೆನೋವಾಗಿದೆ. ಪೊಲೀಸರು ಸದಾಶಿವನಗರ ಠಾಣೆಯಲ್ಲಿ ದಾಖಲಾಗಿರುವ ಎಫ್ಐಆರ್ ಆಧಾರದ ಮೇಲೆ ವಿಚಾರಣೆಗಾಗಿ ಯುವತಿಯನ್ನು ಬಂಧಿಸುತ್ತಾರಾ? ಎಂಬ ಬಗ್ಗೆ ಚರ್ಚೆಗಳಾಗುತ್ತಿವೆ. ಸಿಡಿಯಲ್ಲಿರುವ ಯುವತಿ ಅಜ್ಞಾತ ಸ್ಥಳದಿಂದ ವಿಡಿಯೋ ಮಾಡಿ ಬಿಡುಗಡೆ ಮಾಡಿರುವುದನ್ನು ಪರಿಗಣಿಸಿ ತನಿಖೆ ನಡೆಸುವುದು ಕಷ್ಟ. ಯುವತಿ ಲಿಖಿತ ರೂಪದಲ್ಲಿ ಈ ವಿಚಾರವನ್ನು ಬರೆದು ಸಹಿ ಹಾಕಿ ನೀಡಿದರೆ ಈ ಕುರಿತು ತನಿಖೆ ನಡೆಸಬಹುದು. ಯುವತಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲಾಗಿದೆ. ಆದರೆ, ಹಾಜರಾಗಲಿಲ್ಲ ಎಂದು ನಗರ ಪೊಲೀಸ್ ಆಯುಕ್ತ ಕಮಲ್ ಪಂತ್ ತಿಳಿಸಿದ್ದಾರೆ.



ಸಿಡಿ ಪ್ರಕರಣ ಧಾರಾವಾಹಿ ರೀತಿ ಸಾಗುತ್ತಿದ್ದು, ಯಾರಿಗೆ ಮುಳುವಾಗುತ್ತದೋ ಗೊತ್ತಿಲ್ಲ. ರಾಜ್ಯದಲ್ಲಿ ಗಮನಹರಿಸಲು ನಾನಾ ಸಮಸ್ಯೆಗಳಿದ್ದು, ಇಂತಹ ಘಟನೆಗಳಿಂದ ವೈಯಕ್ತಿಕ ಲಾಭ ಮಾಡಿಕೊಳ್ಳುವ ಸಣ್ಣತನ ನಮ್ಮಲ್ಲಿಲ್ಲ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೆಸರು ಪ್ರಸ್ತಾಪವಾಗುತ್ತಿರುವುದರ ಬಗ್ಗೆ ಅವರೇ ಹೇಳಬೇಕಿದೆ.

| ಎಚ್.ಡಿ.ಕುಮಾರಸ್ವಾಮಿ ಮಾಜಿ ಮುಖ್ಯಮಂತ್ರಿ

### ಜಾಹೀರಾತು ಕಚೇರಿ ಮೇಲೆ ದಾಳಿ

ನ್ಯಾಯಾಲಯದಿಂದ ಸರ್ಚ್ ವಾರಂಟ್ ಪಡೆದ ಎಸ್ಐಟಿ ಅಧಿಕಾರಿಗಳು ಸೋಮವಾರ ಶೇಷಾದ್ರಿಪುರದ ಜಾಹೀರಾತು ಕಚೇರಿಯೊಂದರ ಮೇಲೆ ದಾಳಿ ನಡೆಸಿ ಸಂಜೆ 5 ರಿಂದ 8 ಗಂಟೆಯ ವರೆಗೆ ಪರಿಶೀಲನೆ ನಡೆಸಿದ್ದಾರೆ. ವಿಡಿಯೋ ಮತ್ತು ಫೋಟೋ ಇದೇ ಕಚೇರಿಯಲ್ಲಿ ಎಡಿಟ್ ಮಾಡಿರುವ ಶಂಕೆ ವ್ಯಕ್ತವಾಗಿದೆ. ಶಂಕಿತರ ಪೈಕಿ ಓರ್ವ ವ್ಯಕ್ತಿ ಈ ಸಂಸ್ಥೆ ಜತೆ ಒಡನಾಟ ಹೊಂದಿದ್ದ ಎನ್ನಲಾಗಿದೆ. ಈಗಾಗಲೆ ಪ್ರಕರಣಕ್ಕೆ ಸಂಬಂಧಿಸಿದ ಕೆಲ ಸಾಕ್ಷ್ಯಗಳು ತನಿಖಾ ತಂಡದ ಕೈ ಸೇರಿದ್ದು, ನಾಪತ್ತೆಯಾದವರ ಹೇಳಿಕೆ ದಾಖಲಿಸಿಕೊಳ್ಳುವುದು ಬಾಕಿ ಇದೆ.

### ರೂಂ ಬುಕ್ ಮಾಡಿದ್ದ ಸ್ನೇಹಿತೆ

ಯುವತಿಯ ಸ್ನೇಹಿತೆಯನ್ನು ಈ ಹಿಂದೆ ಎಸ್ಐಟಿ ವಿಚಾರಣೆ ನಡೆಸಿದಾಗ ಕೆಲ ಅಂಶಗಳು ಬೆಳಕಿಗೆ ಬಂದಿದೆ. ಯುವತಿಗೆ ಸ್ನೇಹಿತೆ ಗೋವಾದಲ್ಲಿ ರೂಂ ಮಾಡಿಕೊಟ್ಟಿದ್ದಳು. ಈ ಆಧಾರದ ಮೇಲೆ ಎಸ್ಐಟಿ ತಂಡ ವಿಚಾರಣೆ ನಡೆಸಿತ್ತು. ನನಗೆ ಇದರ ಹಿಂದಿನ ಸತ್ಯ ಗೊತ್ತಿರಲಿಲ್ಲ. ಸ್ನೇಹಿತೆ ಎಂದು ರೂಂ ಮಾಡಿಕೊಟ್ಟಿದ್ದೆ ಅಷ್ಟೇ. ಅದನ್ನು ಹೊರತುಪಡಿಸಿ ನನಗೇನು ಗೊತ್ತಿಲ್ಲ. ನೀವು ಮತ್ತೆ ಯಾವಾಗ ಕರೆದರೂ ಬರುತ್ತೇನೆ ಎಂದು ತಿಳಿಸಿದ್ದಾಳೆ ಎನ್ನಲಾಗಿದೆ.